# ಕೃಷಿ, ರೈತರು ಮತ್ತು ಕೃಷಿಕೂಲಿಕಾರನ್ನು ಸಂರಕ್ಷಿಸಲು

CPI(M)

## ಸಿಪಿಐ(ಎಂ)ಗೆ ಮತ ನೀಡಿ

## ಎಡಪಕ್ಷಗಳನ್ನು ಬಲಪಡಿಸಿ

: ಪ್ರಕಟಣೆ :

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿ

ಭಾರತವು ರೈತರನ್ನು ಹಾಗೂ ಕೂಲಿಕಾರರನ್ನು ಹಿಂದಕ್ಕಿಟ್ಟು ಪ್ರಗತಿಯನ್ನು ಸಾದಿಸಲು ಸಾಧ್ಯವಿಲ್ಲ. ಕಳೆದ 20 ವರ್ಷಗಳಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಎನ್.ಡಿ.ಎ.ಗಳ ದೋರಣೆಗಳು ರೈತರ ಕೃಷಿಯನ್ನು ಬಿಕ್ಕಟ್ಟಿಗೆ ತಳ್ಳಿವೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಕೃಷಿ ನೀತಿಗಳು ಯಾರ ಪರವಾಗಿವೆ?

- ಕೃಷಿಯನ್ನು ಕಂಪನಿಕರಣ ಮಾಡುವುದು, ಕೃಷಿ ಕಂಪನಿಗಳಿಗೆ ಅನಿಯಂತ್ರಿತ ಲಾಭ ಮಾಡುವುದು.
- ಭೂ ಸುಧಾರಣೆಗಳನ್ನು ರದ್ದುಗೊಳಿಸುವುದು ಮತ್ತು ಭೂ ಹಿಡುವಳಿವಳಿಗಳ ಮಿತಿಯ ಕಾಯ್ದೆಗಳನ್ನು ಸಡಿಲಿಸುವುದು.
- ಭೂಸ್ವಾಧೀನ ಮತ್ತು ರಿಯಲ್ ಎಸ್ಟೇಟ್ ಚಟುವಟಿಕಗಳಿಗೆ ದಾರಿ ಮಾಡಿಕೊಡುವುದು.
- ಕೃಷಿ ಮೇಲಿನ ರಿಯಾಯಿತಿಗಳನ್ನು ಮತ್ತು ಕೃಷಿಯಲ್ಲಿ ಸಾರ್ವತ್ರಿಕ ಬಂಡವಾಳ ಹೂಡಿಕೆ ಹಿಂಪಡೆಯುವುದು.
- ಲಾಭದಾಯಕ ಬೆಲೆಗಳನ್ನು ನೀಡದ ಮಾರುಕಟ್ಟೆ ಶಕ್ತಿಗಳಿಗೆ ಮುಕ್ತ ಅವಕಾಶ ಕಲ್ಪಿಸುವುದು.
- ಕೃಷಿ ಸಂಶೋಧನೆ ಮತ್ತು ವಿಸ್ತರಣಾ ಸೇವೆಗಳನ್ನು ಖಾಸಗೀಕರಣಗೊಳಿಸುವುದು.
- ಕೃಷಿ ಲಾಗುವಾಡುಗಳ ಮೇಲಿನ ನಿಯಂತ್ರಣ ತೆಗದುಹಾಕಿ ಅವುಗಳ ಅನಿಯಂತ್ರಿತ ಬೆಲೆ ಏರಿಕೆಗೆ ದಾರಿ ಮಾಡುವುದು.
- ಹಣಕಾಸಿನ ಉದಾರೀಕರಣ ಹಾಗೂ ಗ್ರಾಮೀಣ ಸಾಲದ ಕಡಿತ.
- ಮುಕ್ತ ವ್ಯಾಪಾರ ಮತ್ತು ವ್ಯಾಪಾರದ ಉದಾರೀಕರಣ ವಿದೇಶ ವಸ್ತುಗಳ ಸಂಗ್ರಹಣೆಗೆ ಅನೂಕೂಲ ಮಾಡುವುದು
- ಊಹಾತ್ಮಕ ವ್ಯಾಪಾರ ಮತ್ತು ಭವಿಷ್ಯದ ವ್ಯಾಪಾರಗಳ ಮೂಲಕ ಬೆಲೆ ಎರಿಕೆಗೆ ಅವಕಾಶ ಕಲ್ಪಿಸುವುದು.
- ಕೃಷಿಯಲ್ಲಿ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅನುಮತಿಸಿ ಲಕ್ಷಾಂತರ ಜನರ ಬದುಕನ್ನು ಕುರೂಪಗೊಳುಸುವುದು.

ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಅದಕ್ಕೂ ಪೂರ್ವವದಲ್ಲಿದ್ದ ಬಾಜಪ ನೇತೃತ್ವದ ಎನ್‌ಡಿಎ ಸರಕಾರಗಳು ಕೃಷಿ ಮೇಲಿನ ರಿಯಾಯಿತಿಗಳನ್ನು ನಿರ್ಧಾಕ್ಷಿಣ್ಯವಾಗಿ ಕಡಿತ ಮಾಡಿದವು ಮತ್ತು ನಮ್ಮ ರೈತರು ಈ ಕೆಳಗೆ ತೋರಿಸಿದಂತೆ ಹೇರಳ ರಿಯಾಯತಿ ಪಡೆಯುತ್ತಿರುವ ಯುರೋಪ, ಯುಎಸ್ ಮತ್ತು ಪ್ರಪಂಚದ ಇತರೆ ದೇಶಗಳ ರೈತರೊಂದಿಗೆ ಸ್ಪರ್ಧೆ ಮಾಡಬೇಕಿದೆ.

**ಭಾರತ ಮತ್ತು ಮುಂದುವರೆದ ದೇಶಗಳಲ್ಲಿ ಕೃಷಿ ಮೇಲಿರುವ ರಿಯಾಯಿತಿಗಳ ಹೋಲಿಕೆ**

| ಅ. ಕ್ರ.ಸಂ | ದೇಶ | ರಿಯಾಯಿತಿ (ಪ್ರತಿ ರೈತನಿಗೆ ಅಮೇರಿಕದ ಡಾಲರ್ ಗಳಲ್ಲಿ 1999) | ರೂಪಾಯಿಗಳಲ್ಲಿ ರಿಯಾಯಿತಿ (ಪ್ರತಿ ರೈರನಿಗೆ 1999) |
|---|---|---|---|
| 1 | ಕೆನಡಾ | 9000 ಡಾಲರ | 5,40.000 |
| 2 | ಯೂರೋಪಿಯನ್ ಒಕ್ಕೂಟ | 17,000 ಡಾಲರ | 10,20,000 |
| 3 | ಜಪಾನ | 26000 ಡಾಲರ | 15,60,000 |
| 4 | ಅಮೇರಿಕಸಂ.ಸಂ. | 21000 ಡಾಲರ | 12,60,000 |
| 5 | ಓಇಸಿಡಿ | 11000 ಡಾಲರ | 6,60,000 |
| 6 | ಭಾರತ | 66 ಡಾಲರ | 3,960 |

ಈ ನೀತಿಗಳು ಲಕ್ಷಾಂತರ ಸಣ್ಣ ಅತಿ ಸಣ್ಣ ರೈತರನ್ನು ತೀವ್ರ ಸಂಕಟ ಮತ್ತು ಋಣಭಾದೆಗೆ ನೂಕಿದವಷ್ಟೆ ಅಲ್ಲ ಅನೇಕರು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿವೆ. ಆಳುವ ವರ್ಗಗಳು ಪ್ರಚಾರ ಮಾಡುತ್ತಿರುವ ಸುಳ್ಳು ಮತ್ತು ಭ್ರಮೆಗಳನ್ನು ಸತ್ಯ ಹಾಗೂ ವಾಸ್ತವಿಕತೆಗಳ ಆಧಾರದಲ್ಲಿ ಎದುರಿಸಬೇಕಿದೆ.

**ರೈತರ ಬದುಕು ಮತ್ತು ಕಲ್ಯಾಣ:** ಸರಕಾರ ಈ ನೀತಿಗಳಿಂದ ರೈತರು ಹೆಚ್ಚು ಪ್ರಯೋಜನ ಪಡೆದಿದ್ದಾರೆ ಎಂದು ಪ್ರತಿಪಾದಿಸುತ್ತಿದೆ.

**ಮರೆಮಾಚಿದ ಸತ್ಯಗಳು:**

- 1996 ಮತ್ತು 2012 ರ ಅವಧಿಯಲ್ಲಿ 2,84,694 ರೈತರು ಆತ್ಮಹತ್ಯೆ ಮಾಡಿಕೊಂಡ ಭಯಾನಕ ಸನ್ನಿವೇಶಕ್ಕೆ ಭಾರತ ಸಾಕ್ಷಿಯಾಗಿದೆ. ಅಥವಾ ಪ್ರತಿ ಒಂದು ಘಂಟೆಗೆ ಒಂದು ಆತ್ಮಹತ್ಯೆ ಎಂದು ಹೇಳಬಹುದು. ನಂತರದ ದಿನಗಳಲ್ಲಿ ರೈತರ ಆತ್ಮಹತ್ಯೆಗಳ ಸಂಖ್ಯೆ ಏರಿಕೆಯಾಗಿದೆ. ಸರಾಸರಿ 1995 ಮತ್ತು 2003 ರ ಅವಧಿಯಲ್ಲಿ 15,369 ರೈತರು ಆತ್ಮಹತ್ಯೆ ಮಾಡಿಕೊಂಡರು. ಏನೇ ಆದರೂ 2004 ಮತ್ತು 2012 ರ ಅವಧಿಯಲ್ಲಿ ರೈತರ ಆತ್ಮಹತ್ಯೆಗಳ ವಾರ್ಷಿಕ ಸರಾಸರಿ ಸಂಖ್ಯೆ 16,264 ಕ್ಕೆ

ಏರಿಕೆಯಾಗಿದೆ. ಕಾಂಗ್ರೆಸ್–ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷಗಳ ಆಡಳಿತವಿರುವ ಮಹಾರಾಷ್ಟ್ರದಲ್ಲಿ 1995 ರಿಂದ 54,000 ಕಿಂತ ಹೆಚ್ಚಿನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಮಾನವ ದುಃಖಕ್ಕೆ (ಸಂಕಷ್ಟಕ್ಕೆ) ನೇರಹೊಣೆ ಎಂದರೆ ಕಾಂಗ್ರೆಸ್ ಮತ್ತು ಬಿಜೆಪಿ ನೀತಿಗಳು.

- ರೈತರ ಆತ್ಮಹತ್ಯೆ ಕುರಿತು ಸರಕಾರ ನೀಡಿದ ಅಂಕಿ ಅಂಶಗಳಲ್ಲಿ ಸಾವಿರಾರು ಗೇಣಿ/ಪಾಲಗಾರ ರೈತರು, ಪಹಣಿ ಪತ್ರಿಕೆ ಇಲ್ಲದ ಆದಿವಾಸಿ ಮತ್ತು ದಲಿತರು ಮಹಿಳಾ ರೈತರು, ಅರಣ್ಯ ಭೂಮಿ ಉಳುಮೆ ಮಾಡಿದವರ ಮತ್ತು ಕೃಷಿಕೂಲಿಕಾರರ ಆತ್ಮಹತ್ಯೆಗಳ ಸೇರ್ಪಡೆ ಆಗಿಲ್ಲ. ಸರಕಾರವು ಈ ಸಾವುಗಳನ್ನು ಆತ್ಮಹತ್ಯೆ ಎಂದು ಪರಿಗಣಿಸುತ್ತಿಲ್ಲ. ಅಲ್ಲದೆ ಅನೇಕ ರಾಜ್ಯಗಳು ಅಂದರೆ ಗುಜರಾತ, ಚತ್ತಿಸಗಡ್, ಪಂಜಾಬ್ ಮತ್ತು ತೃಣಮೂಲ ಕಾಂಗ್ರೆಸ ಆಡಳಿತದ ಪಶ್ಚಿಮ ಬಂಗಾಳ ತಮ್ಮ ನೀತಿಗಳ ವಿಫಲತೆಯನ್ನು ಮುಚ್ಚಿಡಲು ರೈತರ ಆತ್ಮಹತ್ಯೆಗಳನ್ನು ವರದಿ ಮಾಡುತ್ತಿಲ್ಲ. ಬಿಜೆಪಿ ಆಡಳಿತವಿರುವ ಚತ್ತಿಸಗಡದಲ್ಲಿ 2011 ರಲ್ಲಿ ರೈತರ ಆತ್ಮಹತ್ಯೆಗಳ ಸಂಖ್ಯೆ ಶೂನ್ಯವೆಂದು ನಾಚಿಕೆ ಇಲ್ಲದೆ ಹೇಳುತ್ತಿದೆ. 2006 ಮತ್ತು 2010ರ ಅವಧಿಯಲ್ಲಿ ಅದೇ ಸರಕಾರವು 7500 ರೈತರ ಆತ್ಮಹತ್ಯೆಗಳಾಗಿವೆ ಎಂದು ವರದಿ ಮಾಡುತ್ತದೆ.
- ಪಶ್ಚಿಮ ಬಂಗಾಲದಲ್ಲಿ ತೃಣಮೂಲ ಕಾಂಗ್ರೆಸ ಅಧಿಕಾರಕ್ಕೆ ಬಂದ ನಂತರ 100 ಆತ್ಮಹತ್ಯೆಗಳು ಆಗಿವೆ ಎಂದು ತಿಳಿಸುತ್ತದೆ. ಕೇರಳದ ಎಲ್‌ಡಿಎಫ್ ಸರಕಾರದಲ್ಲಿ ರೈತರ ಆತ್ಮಹತ್ಯೆಗಳಿಗೆ ಅಂತ್ಯ ಹಾಡಿದ್ದು, ಈಗ ಯುಡಿಎಫ್ ಸರಕಾರದಲ್ಲಿ 100 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಕಾಣಬಹುದು.

**ಕೃಷಿ ಸಾಲ ಮತ್ತು ಋಣಭಾದೆ: ಸರಕಾರವು ರೈತರಿಗೆ ದೊಡ್ಡ ಪ್ರಮಾಣದಲ್ಲಿ ಸಾಲ ನೀಡಿದ ಬಗ್ಗೆ ಪ್ರತಿಪಾದಿಸುತ್ತಿದೆ.**

**ಸತ್ಯ ಏನು?/ ಮರೆಮಾಚಿದ ಸತ್ಯಗಳು:**

- 2000 ರಲ್ಲಿ ಕೃಷಿ ಸಾಲದ ಪ್ರಮುಖ ಫಲಾನುಭವಿಗಳು, ಕಾರ್ಪೊರೇಟಗಳು ಮತ್ತು ಕೃಷಿ ವಾಣಿಜ್ಯ ಸಮೂಹಗಳೇ ಹೊರತು ರೈತರಲ್ಲ. ಭಾರತದಲ್ಲಿ ಬಹು ಸಂಖ್ಯಾತ ರೈತರು ಸಣ್ಣ ರೈತರು, ಅವರು ಹೆಚ್ಚೆಂದರೆ 2 ಲಕ್ಷ ರೂ.ಗಳ ಒಳಗೆ ಸಾಲ ಪಡೆಯುವವರು. 2011 ರಲ್ಲಿ 2 ಲಕ್ಷ ರೂ.ಗಳಿಗಿಂತ ಕಡಿಮೆ ಮೊತ್ತದ ಸಾಲ ಪಡೆದವರ ಸಂಖ್ಯ ಶೇ 48% ರಷ್ಟಿತ್ತೂ. ಇತರ ಸಾಲಗಳಲ್ಲಿ ಹೆಚ್ಚಿನವು ದೊಡ್ಡ ಸಾಲಗಳಾಗಿದ್ದು ಕೋಟಿ ರೂಗಳಿಗೂ ಮಿಗಿಲಾದವುಗಳು, ಇವುಗಳನ್ನು ದೊಡ್ಡ ದೊಡ್ಡ ಕಾರ್ಪೊರೇಟಗಳಿಗೆ ಮತ್ತು ಕೃಷಿ ವಾಣಿಜ್ಯ ವ್ಯಾಪಾರಿ ಕಂಪನಿಗಳ ಸಮೂಹಗಳಿಗೆ ಕೊಡಲಾಗಿತ್ತು. ಇದು ಇನ್ನೂ ಖಚಿತವಾದ ಅಂಶವೆಂದರೆ ದೊಡ್ಡ

ಮೊತ್ತದ ಈ ಸಾಲಗಳನ್ನು ಬ್ಯಾಂಕಗಳ ಮೂಲಕ ಪಟ್ಟಣ ಮತ್ತು ದೊಡ್ಡನಗರ ಪ್ರದೇಶದಲ್ಲಿ ಕೊಡಲಾಗಿತ್ತು. ಯುಪಿಎ ಸರಕಾರದ ಸಾಲ ನೀತಿಗಳು ಕಾರ್ಪೊರೇಟಗಳಿಗೆ ಲಾಭ ಮಾಡಿದವೇ ಹೊರತು ರೈತರಿಗಲ್ಲ.

- ಸರಕಾರ ಸಾಲ ಮನ್ನಾ ಯೋಜನೆ ಕುರಿತು ಹೆಮ್ಮೆಯಿಂದ ಬೀಗುತ್ತಿದೆ. ಆದರೇ ದೊಡ್ಡ ಸಂಖ್ಯೆಯ ರೈತರು ಖಾಸಗೀ ಲೇವಾದೇವಿದಾರರ ಋಣದಲ್ಲಿ ಉಳಿಯುವಂತೆ ಮಾಡಿದೆ. ಏನೇ ಆದರೂ ದೊಡ್ಡ ಮಟ್ಟದ ಭ್ರಷ್ಟಾಚಾರ ಈ ಯೋಜನೆಯಲ್ಲಿ ಬೆಳಕಿಗೆ ಬಂದಿದ್ದು ಶೇ 22 ರಷ್ಟು ಸಾಲಗಳು ಸಂಶಯಕ್ಕೆ ಎಡೆಮಾಡಿಕೊಡುವಂತವುಗಳು ಎಂಬುದನ್ನು ಸಿಎಜಿ ವರದಿ ತೋರಿಸಿದೆ.

- ಇದಕ್ಕೆ ವಿರುದ್ಧವಾಗಿ ಕೇರಳದಲ್ಲಿ ಎಲ್‌ಡಿಎಫ್ ಸರಕಾರ ನೇಮಕ ಮಾಡಿದ್ದ ಋಣ ಪರಿಹಾರ ಆಯೋಗವು ಸಾವಿರಾರು ರೈತರ ಸಾಲಗಳನ್ನು ಪಾರದರ್ಶಕ ಹಾಗೂ ಸಮಗ್ರವಾಗಿ ಮನ್ನಾ ಮಾಡಿತ್ತು. ಕೇರಳದ ಎಲ್‌ಡಿಎಫ್ ಸರಕಾರದ ಜನಪರ ನೀತಿಗಳು ರೈತರ ಆತ್ಮಹತ್ಯೆಗಳನ್ನು(ತಡೆದವು) ಕೊನೆಗಾಣಿಸಿದವು. ಮುಖ್ಯವಾಗಿ ವಿಶ್ವಾಸ ಮೂಡಿಸುವ ಸರಕಾರದ ಧೋರಣೆಗಳು ರೈತಾಪಿ ವರ್ಗದ ಮಧ್ಯದಲ್ಲಿ ಆಸೆಗಳನ್ನು ಮೂಡಿಸಿದವು.

- ರಾಷ್ಟ್ರೀಯ ಬೆಳೆ ವಿಮಾ ಯೋಜನೆಯು ಬೆಳೆ ವಿಮೆಯನ್ನು ಖಾಸಗೀಕರಣಗೊಳಿಸಿ ಐಸಿಐಸಿ–ಲೊಂಬಾರ್ಡ್, ಎಚ್‌ಡಿಎಫ್‌ಸಿ, ಎರ್ನೊ, ಟಾಟಾ, ಅಲಿಯನ್ಸ್, ಎಲ್ ಆ್ಯಂಡ್ ಟಿ, ರಾಯಲ್ ಸುಂದರಂ ಮತ್ತು ರಿಲಯನ್ಸ್ ನಂತಹ ಕಂಪನಿಗಳಿಗೆ ಅವಕಾಶ ಕಲ್ಪಿಸಿದೆ. ಈ ಕಂಪನಿಗಳು ಅಸಾಧ್ಯವಾದ ಕರಾರುಗಳನ್ನು ಹೇರಿ ರೈತರು ತಮ್ಮ ಹಕ್ಕು ಬಾಧ್ಯತೆಗಳನ್ನು ಋಜುವಾತು ಪಡಿಸಿದಂತೆ ಮಾಡಿ ಅವರನ್ನು ಅವರ ಹಕ್ಕುಗಳಿಂದ ವಂಚಿತರನ್ನಾಗಿಸುತ್ತವೆ.

**ಭೂ ಹೀನತೆ, ಭೂಸ್ವಾಧೀನತೆ ಮತ್ತು ಗ್ರಾಮೀಣ ಬಡವರು:**

ಸರಕಾರ ತನ್ನ ಹೊಸ ಭೂಸ್ವಾಧೀನ ಕಾನೂನಿನಿಂದ ರೈತರನ್ನು ಭೂ ಸುಲಿಗೆಕೊರರಿಂದ ರಕ್ಷಿಸಿ ಅವರಿಗೆ ಸಮರ್ಪಕ ಪರಿಹಾರ ಸಿಗುವಂತೆ ಮಾಡಲಾಗಿದೆ ಎಂದು ಹೇಳಿಕೊಳ್ಳುತ್ತಿದೆ.

**ಮರೆಮಾಚಿದ ಸತ್ಯಗಳು:** ಯುಪಿಎ ಸರಕಾರದ ನೀತಿಯ ಒಳಮರ್ಮವು ಭೂಮಿತಿ ಕಾನೂನುಗಳನ್ನು ಸಡಿಲಿಸಿ ಭೂಸುಧಾರಣೆಗಳನ್ನು ರದ್ದುಗೊಳಿಸುವುದೇ ಆಗಿದೆ. ಕಾಂಗ್ರೆಸ್ ಮತ್ತು ಭಾಜಪ ಪಕ್ಷಗಳ ಸರಕಾರಗಳು ಭೂಮಿಯ ಗರಿಷ್ಠಮಿತಿ ಕಾನೂನುಗಳನ್ನು ತಮ್ಮ ರಾಜ್ಯಗಳಲ್ಲಿ ನಿಸ್ಸತ್ವಗೊಳಿಸಿವೆ. ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷ ಸರಕಾರ ಒಂದು ಹೆಜ್ಜೆ ಮುಂದೆ ಹೋಗಿ ಭೂಸುಧಾರಣಾ ಕಾನೂನಿಗೆ ತಿದ್ದುಪಡಿ

ತಂದು ಕೃಷಿ ವ್ಯಾಪಾರಿಗಳನ್ನು ರೈತರಿಗೆ ಸಮಾನರು ಎಂದು ಪರಿಗಣಸಲು ಹೊರಟಿತ್ತು. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರ ಕೂಡಾ ಭತ್ತದ ಗದ್ದೆಗಳು ಮತ್ತು ತೇವಾಂಶದ ಭೂಮಿಯನ್ನು ಕಾನೂನುಬದ್ಧವಾಗಿ ಮತ್ತು ಸರಳವಾಗಿ ಸ್ವಾಧೀನಪಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ.

- ಒಂದೆಡೆ ಕೃಷಿ ಬಿಕ್ಕಟ್ಟು ರೈತರನ್ನು ಭೂಮಿ ಮತ್ತು ದನಕರುಗಳನ್ನು ಒಳಗೊಂಡಂತೆ ತಮ್ಮ ಆಸ್ತಿಗಳನ್ನು ಮಾರಾಟ ಮಾಡುವಂತೆ ಒತ್ತಾಯಿಸುತ್ತದೆ. ಇನ್ನೊಂದೆಡೆ ಬಹುರಾಷ್ಟ್ರೀಯ ಕಂಪನಿಗಳು ಗ್ರಾಮೀಣ ಪ್ರದೇಶಕ್ಕೆ ಆಗಮಿಸುವುದರ ಮೂಲಕ ರೈತರು ತಮ್ಮ ಭೂಮಿ ಮತ್ತು ಗೌರವದಿಂದ ವಿಮುಖರಾಗುತ್ತಿದ್ದಾರೆ.

- ಭಾರತದಲ್ಲಿ ಭೂಹೀನತೆ 1987–88 ಹಾಗೂ 2011–12 ರ ಅವಧಿಯಲ್ಲಿ ಗಾಬರಿಗೊಳ್ಳುವಂತೆ ಏರಿಕೆಯಾಗಿದೆ. ಈ ಅವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಭೂರಹಿತ ಕುಟುಂಬಗಳ (0.01 ಹೆಕ್ಟರ್‌ಗಿಂತ ಕಡಿಮೆ ಭೂಮಿ ಹೊಂದಿರುವವರು.) ಪ್ರಮಾಣ ಶೇ.35 ರಿಂದ ಶೇ 49 ಕ್ಕೆ ಏರಿಕೆಯಾಗಿದೆ. ಅದೇ ವೇಳೆಗೆ ಅತಿ ಹೆಚ್ಚು ಭೂಮಿ ಹೊಂದಿದವರ ಪ್ರಮಾಣ ಶೇ. 48 ರಿಂದ ಶೇ. 50 ಕ್ಕೆ ಏರಿದೆ.

- ಭೂಮಿಯನ್ನು ಕಳೆದುಕೊಳ್ಳುತ್ತಿರುವ ಜನರು ಸರಿಯಾಗಿ ಪುನರ್‌ವಸತಿ ಅಥವಾ ಪರಿಹಾರ ಹೊಂದಿರುವುದಿಲ್ಲ. ಭೂ ಸ್ವಾಧೀನ ಪುನರ್‌ವಸತಿ ಮತ್ತು ಪರಿಹಾರ ಕಾಯ್ದೆ 2013 ಅನ್ನು ಒಳ್ಳೆಯ ಪರಿಹಾರ ಮತ್ತು ಪಾರದರ್ಶಕತೆವುಳ್ಳ ಭೂಸ್ವಾಧೀನ ಕಾಯ್ದೆಯೆಂದು ಮೋಸದಿಂದ ಕರೆಯಲಾಗಿದೆ. ಇದು ಪಾರದರ್ಶಕವಾಗಿಯು ಇಲ್ಲ, ರೈತರು ಹಾಗೂ ಬದುಕು ಕಳೆದುಕೊಳ್ಳುವರಿಗೆ ಒಳ್ಳೆಯ ಪರಿಹಾರ ಒದಗಿಸುವುದಿಲ್ಲ. ಈ ಕಾಯ್ದೆಯು 16 ಪ್ರದೇಶಗಳನ್ನು ಅವುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಕಾಯ್ದೆಗಳು ಬಳಕೆಯಲ್ಲಿ ಇರುವುದರಿಂದ ವಿನಾಯಿತಿ ನೀಡುತ್ತದೆ. ಅವುಗಳೆಂದರೆ ವಿಶೇಷ ಆರ್ಥಿಕ ವಲಯ ಕಾಯ್ದೆ 2005, ರಾಷ್ಟ್ರಿಯ ಹೆದ್ದಾರಿ ಕಾಯ್ದೆ 1956, ಗಣಿ ಕಾಯ್ದೆ 1885 ಮತ್ತು ಇತ್ಯಾದಿ ಇವು ಗರಿಷ್ಟ ಸ್ಥಳಾಂತರಕ್ಕೆ ಕಾರಣವಾಗಿವೆ ಮತ್ತು ಶೇ.90 ಕ್ಕೂ ಮಿಗಿಲಾಗಿ ಸ್ಥಳಾಂತರ ದಾಖಲಿಸಿವೆ. ಈ ಕಾಯ್ದೆಯು ಭೂ ಬಳಿಕೆ ಮಹತ್ವದ ಪ್ರಶ್ನೆಗಳ ಬಗ್ಗೆ ಪೂರ್ವಾನುಮತಿ ಹಾಗೂ ಆಹಾರ ಭದ್ರತಾ ರಕ್ಷಣೆ ಬಗ್ಗೆ ಏನೂ ಹೇಳುವುದಿಲ್ಲ. ಇದೂ ಕೃಷಿ ಭೂಮಿಯನ್ನು ಕಾರ್ಪೊರೇಟ್ ಕಂಪನಿಗಳು ಸ್ವಾಧೀನ ಪಡಿಸಿಕೊಂಡು ಲಾಭ ಗಳಿಸಲು ಹಾಗೂ ರಿಯಲ್ ಎಸ್ಟೇಟ್ ವ್ಯವಹಾರ ಮಾಡಲು ಪ್ರೋತ್ಸಾಹಿಸುತ್ತದೆ.

- ಪಶ್ಚಿಮ ಬಂಗಾಳದ ಎಡಪಕ್ಷಗಳ ಸರಕಾರ ಇಡೀ ದೇಶದಲ್ಲೇ ಅತ್ಯುತ್ತಮವಾಗಿ

ಭೂಹಂಚಿಕೆ ಮಾಡಿದ ದಾಖಲೆ ಹೊಂದಿದೆ. ತೃಣಮೂಲ ಕಾಂಗ್ರೆಸ ಅಧಿಕಾರ ವಹಿಸಿಕೊಂಡ ಮೇಲೆ ಅನೇಕ ರೈತರು ಭೂಮಿಯಿಂದ ಹೊರದೂಡಲ್ಪಟ್ಟಿದ್ದಾರೆ. ಪಶ್ಚಿಮ ಬಂಗಾಳದ ಎಡರಂಗ ಸರಕಾರ ದೇಶದಲ್ಲಿಯೆ ಒಂದು ಮಾದಿರಿಯನ್ನುವಂತೆ ಗೇಣಿದಾರರ ನೋಂದಣಿಯನ್ನು ಖಾತ್ರಿಪಡಿಸಿತ್ತು, ಈಗ ತೃಣಮೂಲ ಕಾಂಗ್ರೆಸ್ ಸರಕಾರ ಗೇಣಿದಾರರನ್ನು ಬಲವಂತವಾಗಿ ಹೊರದಬ್ಬುತ್ತಿದೆ. ಕೇರಳದಲ್ಲಿ ಎಲ್‌ಡಿಎಫ್ ಸರಕಾರ ಇದ್ದಾಗ ಭತ್ತದ ಜಮೀನು ಹಾಗೂ ತೇವಾಂಶದ ಬೂಮಿಯನ್ನು ಅನ್ಯಬಳಕೆಗಾಗಿ ಪರಿವರ್ತಿಸದಂತೆ ತಡೆಯುವ ಕಾನೂನು ರಚಿಸಿತ್ತು. ಕೇವಲ ಎಡ ಮತ್ತು ಸಿಪಿಐ (ಎಂ) ಮಾತ್ರವೆ ಭೂ ಸುಧಾರಣೆಗೆ ಮತ್ತು ಭೂ ವಿತರಣೆಗೆ ಬದ್ದತೆ ಹೊಂದಿದೆ.

**ಉತ್ಪಾದನಾ ವೆಚ್ಚ, ಕೃಷಿ ಪದಾರ್ಥಗಳ ಬೆಲೆಗಳು ಮತ್ತು ಧಾನ್ಯಗಳ ಸಂಗ್ರಹ:**

ಸರಕಾರ ರೈತರ ಉತ್ಪಾದನೆಗಳಿಗೆ ಲಾಭದಾಯಕ ಬೆಲೆ ನೀಡುವ ಬಗ್ಗೆ ಪ್ರತಿಪಾದಿಸುತ್ತದೆ.

**ಮರೆಮಾಚಿದ ಸತ್ಯಗಳು:**

- ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ(ಎನ್‌ಡಿಎ) ಮತ್ತು ಸಂಯುಕ್ತ ಪ್ರಗತಿಪರ ಒಕ್ಕೂಟ(ಯುಪಿಎ)ಗಳ ನೀತಿಗಳು ಕೃಷಿ ಲಾಗವಾಡುಗಳ ಬೆಲೆ ಏರಿಕೆಗೆ ದಾರಿ ಮಾಡಿಕೊಟ್ಟಿವೆ. ಕಳೆದ 4 ವರ್ಷಗಳಲ್ಲಿ ರಾಸಾಯನಿಕ ಗೊಬ್ಬರಗಳ ಬೆಲೆಗಳು ಶೇ 200 ರಷ್ಟು ಎರಿವೆ. ಡಿಸೆಲ್ ಮತ್ತು ವಿದ್ಯುತ್ತ ಶಕ್ತಿ ಬೆಲೆಗಳಲ್ಲಿ ಉಂಟಾದ ಹೆಚ್ಚಳ ನೀರಾವರಿಯನ್ನು ವಿಪರೀತ ದುಬಾರಿ ಮಾಡಿವೆ. ಸರಕಾರ ಗೊಬ್ಬರ ರಿಯಾತಿಗಳನ್ನು ಗೊಬ್ಬರ ಆಮದು ಮಾಡಿಕೊಳ್ಳುತ್ತಿರುವ ಕಂಪನಿಗಳಿಗೆ ಸಹಾಯ ಮಾಡಲು ಉಪಯೋಗಿಸುತ್ತಿದೆ ವಿನಹಃ ಆಂತರಿಕವಾಗಿ ಗೊಬ್ಬರದ ಉತ್ಪಾದನೆ ಹೆಚ್ಚಿಸುವುದಾಗಲಿ, ಅಗ್ಗದ ದರದಲ್ಲಿ ರೈತರಿಗೆ ಗೊಬ್ಬರ ಹಂಚ್ಚಿಕೆ ಮಾಡುವುದಾಗಲಿ ಮಾಡುತ್ತಿಲ್ಲ ಎಂಬುದೆ ನಾಚಿಕೆಗೇಡಿನ ವಿಷಯ.
- ಈ ನೀತಿಗಳ ಪರಿಣಾಮವಾಗಿ, ಲಾಭದಾಯಕ ಬೆಲೆಗಳನ್ನು ಪಡೆಯುವುದು ಒತ್ತಟ್ಟಿಗಿರಲಿ, ರೈತರ ಉತ್ಪಾದನಾ ವೆಚ್ಚವನ್ನು ಗ್ರಹಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಕೃಷಿಯನ್ನೆ ಕೈಬಿಡುವ ಹಂತಕ್ಕೆ ತಲುಪಿದ್ದಾರೆ. ಘೋಷಿತ ಕನಿಷ್ಟ ಬೆಂಬಲ ಬೆಲೆಯು ಅನೇಕ ಬೆಳೆಗಳ ಉತ್ಪಾದನಾ ವೆಚ್ಚವನ್ನು ಭರಿಸುವಂತಿಲ್ಲ. ಉತ್ಪಾದನಾ ವೆಚ್ಚದಲ್ಲಿ ವಿವೇಚನಾ ರಹಿತ ಏರಿಕೆ ಪರಿಗಣಿಸಲು ಸಾಧ್ಯವಾಗುತ್ತಿಲ್ಲ. ಸ್ವಾಮಿನಾಥನ್ ಆಯೋಗವು ಕನಿಷ್ಠ ಬೆಂಬಲ ಬೆಲೆಯು ಸಂಪೂರ್ಣ ಉತ್ಪಾದನಾ ವೆಚ್ಚವನ್ನು ಬರಿಸುವಂತೆ ಇರಲಿ ಎಂದು ಶಿಫಾರಸು ಮಾಡಿದೆ ಮತ್ತು ಅದರೊಂದಿಗೆ ಕನಿಷ್ಠ ಶೇ. 50 ರಷ್ಟು ಹೆಚ್ಚುವರಿಯಾಗಿ ರೈತರಿಗೆ ನೀಡುವಂತೆ ತಿಳಿಸಿದೆ. ಆದರೆ ಇದನ್ನು

ಗೌಣವಾಗಿ ಕಾಣಲಾಗಿದೆ.

- ಕನಿಷ್ಠ ಬೆಂಬಲ ಬೇಲೆ ಪ್ರಕಟಗೊಂಡಿದ್ದರು ಕೆಲವು ರಾಜ್ಯಗಳಲ್ಲಿ ಧಾನ್ಯ ಸಂಗ್ರಹ ವ್ಯವಸ್ಥೆ ಇಲ್ಲವಾಗಿದೆ. ಆದ್ದರಿಂದ ಕೆಲವು ರಾಜ್ಯಗಳಲ್ಲಿ 2012–13 ರಲ್ಲಿ ಭತ್ತ ಬೆಳೆದ ರೈತರು ಪ್ರತಿ ಕ್ವಿಂಟಾಲಿಗೆ ರೂ. 1250 ಬದಲಾಗಿ ರೂ. 650/– ಬೆಂಬಲ ಬೆಲೆ ಪಡೆದರು. ಸಕ್ಕರೆ ವಲಯದಲ್ಲಿ, ಸಕ್ಕರೆ ಉದ್ಯಮದ ಮೇಲಿನ ನಿಯಂತ್ರಣ ತೆಗದು ಹಾಕಿದ್ದರಿಂದ ಕಂಪನಿಗಳು ಲಾಭ ಮಾಡಿಕೊಂಡವು. ರೈತರಿಗೆ ಬರಬೇಕಾಗಿದ್ದ ಸಾವಿರಾರು ಕೋಟಿ ರೂ.ಗಳು ಬಾಕಿಯಾಗಿ ರೈತರರನ್ನು ತೀವ್ರ ಸಂಕಷ್ಟಕ್ಕೆ ನೂಕಿತು.

- ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಸಮರ್ಪಕ ತಂತ್ರಜ್ಞಾನ ಮತ್ತು ವಿಸ್ತರಣಾ ಸೇವೆಗಳನ್ನು ಅಳವಡಿಸುವ ಬಗ್ಗೆ ಯಾವ ಗಂಭೀರ ಪ್ರಯತ್ನಗಳು ನಡೆಯಲಿಲ್ಲ. ಇನ್ನೊಂದೆಡೆಗೆ ಲೂಟಿಕೋರ ಕೃಷಿ ವ್ಯಾಪಾರಿ ಕಂಪನಿಗಳಾದ ಮಾನ್ಸಂಟೊ, ಡೂ–ಪಾಂಟ್, ಕಾರ್ಗಿಲ್, ಟಾಟಾ ಕೆಮಿಕಲ್ಸ್, ಬಿರ್ಲಾ, ರಿಲಾಯನ್ಸ್, ಯುಬಿ ಮತ್ತು ಇತರ ಸಮೂಹಗಳ ಹಿಡಿತ ಹೆಚ್ಚಾಗುತ್ತಾ ಹೋದದ್ದೆ ಯುಪಿಎ ಮತ್ತು ಎನ್‌ಡಿಎ ಸರಕಾರಗಳ ಮಹತ್ವದ ಸಾಧನೆಯಾಗಿದೆ.

**ಕೃಷಿ ಬೆಳವಣಿಗೆ ಮತ್ತು ಸಾರ್ವಜನಿಕ ವೆಚ್ಚ:**

**ಸರಕಾರವು ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಯ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಪ್ರತಿಪಾದಿಸುತ್ತಿದೆ.**

**ಮರೆಮಾಚಿದ ಸತ್ಯಗಳು:**

- ಕೃಷಿ ಬೆಳೆವಣಿಗೆ 2011–12 ಮತ್ತು 2012–13 ರಲ್ಲಿ ಶೇ.1.8 ಕ್ಕೆ ಇಳಿಕೆ ಕಂಡಿದ್ದು ಕೃಷಿಯನ್ನು ಅತ್ಯಂತ ನಿಷ್ಕಾಳಜಿ ಮಾಡಿದ್ದರ ದ್ಯೋತಕವಾಗಿದೆ. ವಿಶಾಲ ಜನವಿಭಾಗಗಳು ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳ ಮೇಲೆ ಅವಲಂಬಿಸುವುದನ್ನು ಮುಂದುವರಿಸಿದಾಗ ಇದರ ಪ್ರಮಾಣ 2011–12 ರಲ್ಲಿ ಶೇ. 14 ಕ್ಕೆ ಇಳಿದಿದೆ.

- ಸಾರ್ವಜನಿಕ ಹೂಡಿಕೆ ಕೃಷಿಯಲ್ಲಿ ಇಳಿಮುಖವಾಗುವುದನ್ನು ಕಾಣಬಹುದು. ಇದರ ಪರಿಣಾಮ ಉತ್ಪಾದನೆ ಮತ್ತು ಆದಾಯದಲ್ಲಿ ಹಿನ್ನಡೆಯಾಗಿದೆ. ಜಿಡಿಪಿಗೆ ಹೋಲಿಸಿದರೆ ಗ್ರಾಮೀಣ ಅಭಿವೃದ್ದಿ ವೆಚ್ಚದಲ್ಲಿ ತೀವ್ರ ಇಳಿಕೆ ಕಂಡಿದೆ. ಯುಪಿಎದ ಎರಡನೆ ಅವಧಿಯಲ್ಲಿ ಎಮ್.ಒ.ಅರ್.ಡಿ. ಮೇಲಿನ ವೆಚ್ಚವು 2009–10ರಲ್ಲಿ ಶೇ. 1.1 ಇದ್ದದ್ದು 2012–13 ರಲ್ಲಿ ಶೇ. 0.7 ಗೆ ಇಳಿಮುಖವಾಗಿದೆ.

- ಇದರ ಪರಿಣಾಮವಾಗಿ ರೈತರ ಆದಾಯ ಕಡಿಮೆ ಆಗುತ್ತಿದೆ. ಸ್ಥಗಿತಗೊಂಡ ಇಳುವರಿ, ಮಣ್ಣಿನ ಸವಕಳಿ, ಸತ್ವಹೀನತೆ, ನೀರಾವರಿಯ ಸೌಲ್ಯಭ್ಯದ ಕೊರತೆ, ತುಟ್ಟಿಯಾದ ಲಾಗುವಾಡುಗಳು, ಲಾಭದಾಯಕವಲ್ಲದ ಬೆಲೆಗಳು, ಮತ್ತು ಖಾತ್ರಿಪಡಿಸದ ಸಂಗ್ರಹಣಾ ವ್ಯವಸ್ಥೆಗಳು ಇತ್ಯಾದಿಗಳೆಲ್ಲವೂ ರೈತರ ಆದಾಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿವೆ.

**ಗ್ರಾಮೀಣ ಅಭಿವೃದ್ಧಿ ಮತ್ತು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ.**

ಪ್ರತಿ ಗ್ರಾಮೀಣ ಕುಟುಂಬದಲ್ಲಿ ಒಬ್ಬನಿಗೆ 100 ದಿನಗಳ ಕೆಲಸ ಕೊಡುವ ಕಾನೂನು ರೂಪಗೊಂಡಿದ್ದು ಒಂದು ಮಹತ್ವದ ಹೆಜ್ಜೆಯಾಗಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಸಂಸತ್ತಿನ ಹೊರಗೆ ಮತ್ತು ಒಳಗೆ ನಿರಂತರ ಹೋರಾಟ ಮಾಡಿದ್ದರ ಫಲವಾಗಿ ತೀರ ದುರ್ಬಲ ಹಾಗೂ ಅಸಮರ್ಪಕವಾದ ಸರಕಾರದ ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಲು ಸಾದ್ಯವಾಯಿತು. ಆದರೆ ಸರಕಾರ ತನ್ನ ನಿಧಾನಗತಿ ಕೆಲಸ ಹಾಗೂ ಕಡಿಮೆ ಹಂಚಿಕೆಗಳಿಂದ ಈ ಕಾನೂನನ್ನೇ ಹಾಳು ಮಾಡಿದೆ. ಶ್ರೀಮಂತ ಕೃಷಿ ವ್ಯಾಪಾರ ಕಂಪನಿಗಳು ಹಾಗೂ ದೊಡ್ಡ ಭೂಮಾಲಿಕರು ನಿರಂತರ ಕೂಲಿಕಾರರ ಸೇವೆಯನ್ನು ಬಯಸುವವರಾಗಿದ್ದರಿಂದ ಅವರ ಒತ್ತಡಗಳಿಗೆ ಮಣಿದ ರಾಜ್ಯ ಸರಕಾರಗಳಾದ ಮಹಾರಾಷ್ಟ್ರ, ಗುಜರಾತ, ಪಂಜಾಬ್, ಹರಿಯಾಣ ಯಾವುದೇ ಪಕ್ಷದ ಸರಕಾರವಿರಲಿ ಕಾಂಗ್ರೆಸ್–ಭಾಜಪ ಅಥವಾ ಅವುಗಳ ಒಡನಾಡಿಗಳೆ ಇದ್ದರೂ ಈ ಕಾಯ್ದೆಯನ್ನು ತಮ್ಮ ರಾಜ್ಯಗಳಲ್ಲಿ ಹಾಳುಗೆಡೆವಿವೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಗ್ರಾಮೀಣ ಜನರ ಬದುಕನ್ನು ಬದಲಾಯಿಸದೇ ಮತ್ತು ಅದರ ಅನುಷ್ಠಾನಕ್ಕಾಗಿ ಮತ್ತು ಸೌಲಭ್ಯಗಳ ಅಭಿವೃದ್ಧಿಗಾಗಿ ದೊಡ್ಡ ಪ್ರಮಾಣದ ಆರ್ಥಿಕ ನೆರವು ನೀಡಲಾಗಿದೆ ಎಂದು ಸರಕಾರ ಪ್ರತಿಪಾದಿಸುತ್ತಿದೆ.

**ಮರೆಮಾಚಿದ ಸತ್ಯಗಳು :**

- ಯುಪಿಎ–2 ರ ಅವದಿಯಲ್ಲಿ 'ರೇಗಾ'ದ ಮೇಲಿನ ವೆಚ್ಚವು 2009–10 ರಲ್ಲಿ ಜಿಡಿಪಿಯ ಶೇ.0.6% ರಷ್ಟು ಇದ್ದುದು 2012–13 ರಲ್ಲಿ ಜಿಡಿಪಿಯ ಶೇ.0.4% ರಷ್ಟಕ್ಕೆ ಇಳಿಕೆಯಾಗಿದೆ. ನಾಚಿಕೆಗೇಡಿನ ಸಂಗತಿಯೆಂದರೆ 1/3 ಕ್ಕಿಂತ ಕಡಿಮೆ ಮೊತ್ತವು ಬಳಿಕೆಯಾಗದೆ ಉಳಿದಿದೆ.
- 100 ದಿನಗಳ ಕೆಲಸಕ್ಕೆ ಬದಲಾಗಿ, ಪ್ರತಿ ಗ್ರಾಮೀಣ ಕುಟುಂಬಕ್ಕೆ ಸಿಗುವ ಉದ್ಯೋಗ 2009–10ರಲ್ಲಿ 54 ದಿನಗಳು ಇದ್ದದ್ದು 2011–12 ರಲ್ಲಿ 43

ದಿನಗಳಿಗೆ ಇಳಿಕೆಯಾಯಿತು. ಮತ್ತು 2012–13 ರಲ್ಲಿ ಕೇವಲ 36 ದಿನಗಳಿಗೆ ಇಳಿಕೆಯಾಯಿತು. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್‌ನ ಸರಕಾರದಲ್ಲಿ ಉದ್ಯೋಗದ ಲಭ್ಯತೆ 14 ದಿನಗಳಿಂದ 35 ದಿನಗಳವರೆಗೆ ಇತ್ತು, ಇದು ರಾಷ್ಟ್ರೀಯ ಸರಾಸರಿಗಿಂತ ತೀರ ಕೆಳಗಿಳಿದಂತೆ ಸರಿ.

- ಉದ್ಯೋಗ ಹುಡುಕಿ ಬಂದವರಿಗೆ ಉದ್ಯೋಗ ನಿರಾಕರಿಸಲಾಗುತ್ತಿದೆ, ನಿರುದ್ಯೋಗ ಭತ್ಯೆಯನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ನೀಡುವುದಕ್ಕೆ ಬದ್ಧವಾಗಿಲ್ಲ. ಆಶ್ಚರ್ಯಕರ ಸಂಗತಿ ಎಂದರೆ 8 ರಾಜ್ಯಗಳಲ್ಲಿ 2006 ಮತ್ತು 2009 ಅವಧಿಯಲ್ಲಿ ಅಲ್ಪ ಪ್ರಮಾಣದ 4078 ಕೂಲಿಕಾರರಿಗೆ ನಿರುದ್ಯೋಗ ಭತ್ಯೆ ನೀಡಲಾಗಿದೆ. ಕೆಲಸ ನಿರ್ವಹಿಸಿದ 15 ದಿನಗೊಳಗಾಗಿ ಕೂಲಿಕಾರರಿಗೆ ಪಗಾರ ಕೊಡಲೇಬೇಕೆಂಬ ನಿಯಮವನ್ನು ಉಲ್ಲಂಘಿಸಲಾಗಿದೆ. ಜಾರ್ಖಂಡ ಮತ್ತು ಮಹಾರಾಷ್ಟ್ರಗಳಲ್ಲಿ ನಿಧಾನಗತಿಯ ಕೂಲಿ ಪಾವತಿಸುವಿಕೆಯು ಕೂಡ ಕೂಲಿಕಾರರ ಆತ್ಮಹತ್ಯೆಗೆ ದಾರಿ ಮಾಡಿಕೊಟ್ಟಿದೆ.
- ಎಡರಂಗ ನೇತೃತ್ವದ ತ್ರಿಪುರ ಸರಕಾರವು 'ರೇಗಾ' ಯೋಜನೆಯ ನಿಧಿಯನ್ನು ಅತ್ಯಂತ ಗರಿಷ್ಠ ಪ್ರಮಾಣದಲ್ಲಿ ಸದ್ಬಳಿಕೆ ಮಾಡಿಕೊಂಡು ಉದ್ಯೋಗ ಅವಕಾಶಗಳನ್ನು ಹೆಚ್ಚಳ ಮಾಡಿದ ದಾಖಲೆ ಇದೆ. ತ್ರಿಪುರ ಸರಕಾರವು 87 ದಿನಗಳಿಗೂ ಮೀರಿ ಉದ್ಯೋಗ ನೀಡಿದೆ ಮತ್ತು ಬುಡಕಟ್ಟು ಜನರಿಗೆ 92 ದಿನಗಳ ಉದ್ಯೋಗ ನೀಡಿದೆ.
- ಭಾರತ ನಿರ್ಮಾಣ, ಗ್ರಾಮೀಣ ಭಾರತದಲ್ಲಿ ಪ್ರಮುಖ ಮೂಲ ಸೌಲಭ್ಯಗಳನ್ನು ವೃದ್ಧಿ ಮಾಡುವುದಕ್ಕೆ ಸೀಮಿತ ಕಾರ್ಯಕ್ರಮವಾಗಿದ್ದು, ಏನೊಂದು ಹೇಳಿಕೊಳ್ಳುವಂತ ಪ್ರಗತಿ ಸಾಧಿಸಿಲ್ಲ, ಕಾಂಗ್ರೆಸ್–ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ ಆಡಳಿತವಿರುವ ಮಹಾರಾಷ್ಟ್ರದಲ್ಲಿ ಸುಮಾರು 70,000 ಕೋಟಿ ರೂ.ಗಳ ನೀರಾವರಿ ಹಗರಣದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಎನ್‌ಸಿಪಿ ಸಾರ್ವಜನಿಕ ಹಣವನ್ನು ವಂಚಿಸಿವೆ(ಕೊಳ್ಳೆಹೊಡೆದಿವೆ). ಮಹಾರಾಷ್ಟ್ರದಲ್ಲಿ ಕಳೆದ ಒಂದು ದಶಕದಲ್ಲಿ ನೀರಾವರಿಗೆ ಒಳಗಾದ ಪ್ರದೇಶ ಶೇ.0.1 ಇದ್ದು, ದೇಶದಲ್ಲೆ ಅತಿಕಡಿಮೆ ಬೆಳವಣಿಗೆಯ ಪ್ರಮಾಣವಾಗಿದೆ. ಇದೆ ರೀತಿ ಅಕ್ರಮಗಳು ಮಧ್ಯಪ್ರದೇಶ, ಆಂಧ್ರಪ್ರದೇಶ ಮತ್ತು ಕರ್ನಾಟಕಗಳಲ್ಲೂ ನಡೆದಿವೆ.

## ವಾಣಿಜ್ಯ ಉದಾರೀಕರಣ ಮತ್ತು ಕೃಷಿ ಕಂಪನೀಕರಣ :

ವಾಣಿಜ್ಯ ಉದಾರೀಕರಣ ಮುಕ್ತ ವ್ಯಾಪಾರ ಒಪ್ಪಂದಗಳು ವಿದೇಶಿ ನೇರ ಹೂಡಿಕೆ ಮತ್ತು ಡಬ್ಲ್ಯುಟಿಓ ಸಚಿವರ ಮಟ್ಟದ ಒಪ್ಪಂದಗಳು ಭಾರತೀಯ ರೈತರಿಗೆ ಪ್ರಯೋಜನಕಾರಿಯಾಗಿವೆ ಎಂದು ಸರ್ಕಾರವು ಪ್ರತಿಪಾದಿಸುತ್ತಿದೆ.

**ಮರೆಮಾಚಿದ ಸತ್ಯಗಳು:**

- ಯುಪಿಎ ಮತು ಎನ್‌ಡಿಎ ಸರಕಾರಗಳ ವ್ಯಾಪಾರ ನೀತಿಗಳು ನಮ್ಮ ದೇಶದ ಸಾರ್ವಭೌಮ ಹಕ್ಕುಗಳಿಗೆ ಬೆದರಿಕೆಯನ್ನುಂಟು ಮಾಡುತ್ತಿವೆ. ಮತ್ತು ಅವು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿವೆ. ಆ ನೀತಿಗಳನ್ನು ಸಂಸತ್ತಿನ ನಿಯಮಗಳನ್ನು ಉಲ್ಲಂಘಿಸಿ ಕಳ್ಳಮಾರ್ಗದಿಂದ ಹೇರಲಾಗುತ್ತಿದೆ.

- ಕೃಷಿಯಲ್ಲಿ ತಾಂತ್ರಿಕ ಸಹಕಾರದ ಹೆಸರಿನಲ್ಲಿ ಅಮೇರಿಕದೊಂದಿಗೆ ಜ್ಞಾನ ಉಪಕ್ರಮಣ ಪ್ರಾರಂಭವಾಯಿತು. ಬೀಜ ಆಹಾರ ಮತ್ತು ಕಿರುಕುಳ ವ್ಯಾಪಾರದಲ್ಲಿ ಏಕಸ್ವಾಮತ್ವ ಹೊಂದಿದ ಅಮೇರಿಕದ ಕಂಪನಿಗಳಾದ ಮಾನ್ಸಂಟೊ, ಆರ್ಚರ, ಡೇನಿಯಲ್, ಮಿಡಲ್ಯಾಂಡ್ ಮತ್ತು ವಾಲ್‌ಮಾರ್ಟ್ ಜ್ಞಾನ ಉಪಕ್ರಮ ಮಂಡಳಿಯಲ್ಲಿ ಪ್ರಾತಿನಿಧ್ಯ ಕಲ್ಪಿಸಲಾಗಿದೆ. ಅದರೊಂದಿಗೆ ಐಟಿಸಿ, ಎಫ್‌ಐಸಿಸಿಐ, ಸಿಐಐ ಕಂಪನಿಗಳ ಪ್ರಾತಿನಿಧ್ಯವಿದೆ. ಅಂದಿನಿಂದ ಈ ಮಂಡಳಿಯು ಈ ದೇಶದಲ್ಲಿ ಕೃಷಿ ನೀತಿ ಮತ್ತು ಸಂಶೋಧನೆ ಹೇಗೆ ಇರಬೇಕು ಎಂಬುದಕ್ಕೆ ನಿರ್ದೇಶನ ನೀಡುತ್ತದೆ. ಅಮೇರಿಕಾದ ಕೃಷಿ ವ್ಯಾಪಾರಿ ಕಂಪನಿಗಳು ಭಾರತದ ಎಲ್ಲಾ ಕೇಂದ್ರಗಳಲ್ಲಿ ಒಳನುಸುಳಿ ಕೃಷಿ ಸಂಶೋಧನೆ, ವಿಸ್ತರಣೆ ಹಾಗೂ ನೀತಿ ನಿರೂಪಣೆಗಾಗಿ ಜ್ಞಾನ ಉಪಕ್ರಮಣ ಮಂಡಳಿಯನ್ನು ಉಪಯೋಗಿಸಿಕೊಂಡಿವೆ.

- ವಿಶ್ವ ವಾಣಿಜ್ಯ ಸಂಘಟನೆಯ ಸಚಿವರ ನಿರ್ಣಯದ ಅಡಿಯಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ರೈತರ ಮತ್ತು ಬಡವರ ಹಿತಾಸಕ್ತಿಗಳೊಂದಿಗೆ ರಾಜಿ ಮಾಡಿಕೊಂಡಿದೆ. ಕನಿಷ್ಟ ಬೆಂಬಲ ಬೆಲೆಯ ಸುಪರ್ದಿಯಲ್ಲಿರುವ ಆಹಾರದ ಬುಟ್ಟಿ ದೊಡ್ಡದಾಗಲೇ ಇಲ್ಲ. ದ್ವಿದಳ ಧಾನ್ಯಗಳು, ಅಡುಗೆ ಎಣ್ಣೆ ಮತ್ತು ಇತರ ಬೆಳೆಗಳು ವಿಶ್ವ ವ್ಯಾಪಾರ ಸಂಘಟನೆಯಿಂದ ಬಣ್ಣಿಸಲಾದ ಸಾಂಪ್ರದಾಯಿಕ ಆಹಾರಧಾನ್ಯ ಬೆಳೆಗಳನ್ನು ಹೊರತು ಪಡಿಸಿದ ಬೆಳೆಗಳನ್ನು ಆಹಾರ ಭದ್ರತಾ ಯೋಜನೆಯಲ್ಲಿ ಒಳಗೊಳಿಸಲಾಗಿಲ್ಲ. ಇದು ಅಲ್ಲದೆ ಸಂಗ್ರಹಿಸಿದ ಆಹಾರ ದಾನ್ಯಗಳ ಪ್ರಮಾಣ ಕೂಡಾ ಹೆಚ್ಚಳವಾಗಲಿಲ್ಲ. ಇದರಿಂದ ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ಗಂಭೀರವಾದ ತೊಡಕುಗಳು ಉಂಟಾಗಿವೆ. ಆಹಾರ ಭದ್ರತಾ ಕಾರ್ಯಕ್ರಮದಲ್ಲಿ ಹಕ್ಕು ಪ್ರಾಪ್ತಗೊಳಿಸುವಿಕೆ ಅದರಂತೆ ಬೇರೆ ಬೇರೆ ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಇವುಗಳನ್ನು ತಡೆಯಬೇಕು.

- ವಿಶ್ವ ವ್ಯಾಪಾರ ಸಂಘಟನೆಯ ಶ್ರೀಮಂತ ದೇಶಗಳ ರಪ್ತು ರಿಯಾಯಿತಿ ಮತ್ತು ಅಮೇರಿಕ ಹತ್ತಿ ರಿಯಾಯಿತಿಯಂತಹ ಪ್ರಶ್ನೆಗಳ ವ್ಯವಹಾರದಲ್ಲಿ ವಿಫಲವಾಗಿದೆ. ಅಮೇರಿಕ ಸಂಯುಕ್ತ ಸಂಸ್ಥಾನ ಮತ್ತು ಯುರೋಪಿನ ಒಕ್ಕೂಟಗಳು ತಮ್ಮ ಆಂತರಿಕ ರಿಯಾಯಿತಿಗಳನ್ನು ಅದರಂತೆ ರಪ್ತು

ರಿಯಾಯಿತಿಗಳನ್ನು ಮುಂದುವರೆಸಿವೆ. ಅಮೇರಿಕಾ ತನ್ನ ರಿಯಾಯಿತಿಯ ಪ್ರಮಾಣವನ್ನು ದ್ವಿಗುಣಗೊಳಿಸಿದೆ. 1995 ಮತ್ತು 2010 ರ ಅವಧಿಯಲ್ಲಿ 61 ಬಿಲಿಯನ್ ಡಾಲರಿಗೆ ಏರಿಕೆಯಾಗಿದೆ. ಯುರೋಪಿನ ಒಕ್ಕೂಟ 2006 ಮತ್ತು 2009 ರ ಅವಧಿಯಲ್ಲಿ ತನ್ನ ರಿಯಾಯಿತಿಯನ್ನು 90 ಪೌಂಡದಿಂದ 79 ಬಿಲಿಯನ್‌ಗೆ ಹೆಚ್ಚಳ ಮಾಡಿದೆ.

- ಕಾಂಗ್ರೆಸ್ ಮತ್ತು ಭಾಜಪ ಮತ್ತು ಅವುಗಳ ಸ್ನೇಹಿತ ಪಕ್ಷಗಳ ಆಡಳಿತದ ರಾಜ್ಯಗಳಲ್ಲಿ ವಿಸ್ತರಣೆಯನ್ನು ಖಾಸಗೀಕರಣ ಮಾಡಿವೆ. ರಾಜಸ್ಥಾನದಲ್ಲಿ ಮಾನ್ಸಂಟೊ, ಡೂಪಾಂಟ್, ಬಾಯರ್ಸ್, ಪೆಪ್ಸಿಕೊ, ಕಾರ್ಗಿಲ್, ಸಾಲ್‌ಮಿಲ್ಸ್, ಲೂಪಿನ ಮತ್ತು ಕೆಲವು ಭಾರತಿಯ ಕಂಪನಿಗಳಿಗೆ ಕೃಷಿ ಬಾಗಿಲುಗಳನ್ನು ತೆರೆದಿದೆ. ರಾಜಸ್ಥಾನ ಮತ್ತು ಗುಜರಾತ ರಾಜ್ಯಗಳಲ್ಲಿ ಮಾನ್ಸಂಟೊ "ಗೋಲ್ಡನ್ ರೇಸ್ ಮತ್ತು ಸನ್‌ಶೈನ್" ಎಂಬ ಎರಡು ದೊಡ್ಡ ಮೆಕ್ಕೆಜೋಳ ಯೋಜನೆಗಳನ್ನು ಹೊಂದಿದೆ. ರಾಜ್ಯ ಸರಕಾರ ಈ ಕಂಪನಿಯಿಂದ ಸಂಕರಣ ಬೀಜಗಳನ್ನು ಖರೀದಿಸುತ್ತದೆ ಹಾಗೂ ರೈತರಿಗೆ ವಿತರಣೆ ಮಾಡುತ್ತದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯು ಇದರ ವೆಚ್ಚವನ್ನು ಭರಿಸುತ್ತದೆ.
- ಯುಪಿಎ ಸರಕಾರವು ಮುಕ್ತ ವ್ಯಾಪಾರ ಒಪ್ಪಂದದ ಬಹುದೊಡ್ಡ ಸಂಖ್ಯೆಯ ಆಶ್ರಯ ಪಡೆದಿದೆ. ಬೇರೆ ಬೇರೆ ದೇಶಗಳ ಮತ್ತು ಪ್ರಾದೇಶಿಕ ಸಮೂಹಗಳ 56 ಮುಕ್ತ ವ್ಯಪಾರ ಒಪ್ಪಂದಗಳು ಇನ್ನೂ ಆಗಬೇಕಿದೆ. ಯುಪಿಎ ಸರಕಾರವು ಇಂಡೊ–ಏಷಿಯನ್ ಮುಕ್ತ ವ್ಯಪಾರ ಒಪ್ಪಂದಕ್ಕೆ ಸಹಿ ಹಾಕಿದೆ ಮತ್ತು ಯುರೋಪಿನ ಒಕ್ಕೂಟದೊಂದಿಗೆ ಗುಪ್ತ ಮಾತುಕತೆಗಳಲ್ಲಿ ತೊಡಗಿದ್ದು ಇಷ್ಟರಲ್ಲೆ ಭಾರತ ಯುರೋಪಿಯನ್ ಒಕ್ಕೂಟಗಳ ನಡುವೆ ಮುಕ್ತ ವ್ಯಾಪಾರ ಒಪ್ಪಂದ ಏರ್ಪಡಲಿದೆ. ಈ ಎಲ್ಲ ಒಪ್ಪಂದಗಳು ನಮ್ಮ ಆಂತರಿಕ ಮಾರುಕಟ್ಟೆ ಹಾಗೂ ಭಾರತದ ರೈತರ ಮೇಲೆ ದುಷ್ಪರಿಣಾಮ ಬೀರಲಿದೆ.
- ಬೀಜ, ಸಸ್ಯ ನೆಡುವ ಸಾಮಾಗ್ರಿಗಳನ್ನು ಅಭಿವೃದ್ಧಿಪಡಿಸಲು ಮತ್ತು ಕೃಷಿ ತತ್ಸಂಬಂಧಿ ಸೇವೆಗಳಿಗಾಗಿ ಶೇ. 100 ವಿದೇಶಿ ನೇರ ಹೂಡಿಕೆಗೆ ಆವಕಾಶ ಕಲ್ಪಿಸಲಾಗಿದೆ. ಬೀಜಗಳ ಬೆಲೆಗಳ ಮೇಲಿನ ರಾಯಧನದ ಮೇಲೆ ಯಾವುದೇ ನಿಯಂತ್ರಣ ಇಲ್ಲದಾಗಿದೆ ಮತ್ತು ಬೀಜ ಏಕಸ್ವಾಮ್ಯ ಕಂಪನಿಗಳನ್ನು ಇನ್ನಷ್ಟು ಬಲಿಷ್ಟಗೊಳಿಸಲಾಗುತ್ತಿದೆ. ತೋಟದ ವಲಯದಲ್ಲೂ ಸಹಾ ಶೇ. 100 ರಷ್ಟು ವಿದೇಶ ನೇರ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದೆ. ಇದು ಮುಂದಿನ ದಿನಗಳಲ್ಲಿ ಭೂ ಬಳಕೆಯನ್ನು ಬದಲಿಸುತ್ತದೆ. ರಿಯಲ್ ಎಸ್ಟೇಟ್ ಚಟುವಟಿಕೆಗಳಿಗೆ ದಾರಿ ಮಾಡಿಕೊಡುತ್ತದೆ.

- ಭಾರತೀಯ ಕೃಷಿಯ ಮೇಲೆ ಮಾಡಲಾದ ಇತ್ತೀಚಿಗಿನ ದಾಳಿಯೆಂದರೆ ಹೊರನೋಟಕ್ಕೆ ಲಾಭದಾಯಕವೆಂದು ತೋರುವ ಸಾರ್ವಜನಿಕ ಖಾಸಗಿ ಪಾಲುಗಾರಿಕೆ ಪ್ರಸ್ತಾವ. ಇದು ಜಾಗತೀಕ ಆರ್ಥಿಕ ವೇದಿಕೆಯ ಹೊಸ ಕೃಷಿ ಉಪಕ್ರಮಣವಾಗಿದ್ದು ಸಮಗ್ರ ಕೃಷಿ ಅಭಿವೃದ್ಧಿಗಾಗಿ ಈ ಯೋಜನೆ ರೂಪಿಸಲಾಗಿದೆ. ಜಾಗತಿಕ ಆರ್ಥಿಕ ವೇದಿಕೆ ಮತ್ತು ಮ್ಯಾಕಿನ್ಸೆ ಒಟ್ಟಾಗಿರಿಸಿದರೆ, ಈ ಉಪಕ್ರಮಣವು 26 ಜಾಗತಿಕ ಪಾಲುದಾರಿಕೆ ಕಂಪನಿಗಳಿಂದ ನಡೆಯುತ್ತಿದ್ದು, ಆಹಾರ ಮೌಲ್ಯ ಸರಪಳಿ ಮತ್ತು ಅದರಾಚೆ ಅಂಶಗಳನ್ನು ಒಳಗೊಂಡಿದೆ. ಈ ಪಟ್ಟಿಯಲ್ಲಿ ಆರ್ಚರ ಡೇನಿಯಲ್ಸ್ ಮಿಡ್‌ಲ್ಯಾಂಡ್, ಬಾಸ್ಪ, ಬಾಯರ, ಕೋಕೊ ಕೋಲಾ, ಡ್ಯೂ ಪಾಂಟ, ಹಿನಕೇನ, ನೆಸ್ಲಿ, ಪೆಪ್ಸಿಕೋಂ, ಸಾಲ್‌ಮಿಲ್ಲರ್, ಸಿಜೆಂಟಾ ಮತ್ತು ವಾಲ್‌ಮಾರ್ಟ್ ಕಂಪನಿಗಳು ಸೇರಿವೆ.
- ಲೋಕಸಭೆಗೆ ಚುನಾವಣೆ ಘೋಷಣೆಯಾದ ಈ ಸಂದರ್ಭದಲ್ಲಿ ಪರಿಸರ ಮತ್ತು ಅರಣ್ಯ ಮಂತ್ರಾಲಯವು ವಂಶವಾಹಿ ತಳಿ ಬೆಳೆಗಳ ಕ್ಷೇತ್ರ ಪರೀಕ್ಷೆಗೆ ಅನುಮತಿ ನೀಡಿದೆ. ಮಾನ್ಸಂಟೊ ಮತ್ತು ಇತರ ಕೃಷಿ ವ್ಯಾಪಾರಿ ಕಂಪನಿಗಳ ಆಜ್ಞೆಯಂತೆ ಯಾವುದೆ ಜೈವಿಕ ಸಂರಕ್ಷಣೆ ಕಠಿಣ ನಿಯಮಗಳನ್ನು ಅಳವಡಿಸಿದೆ. ಜೀವ ವೈವಿಧ್ಯತೆಗೆ ಒತ್ತು ಕೊಡದೆ, ಬೀಜ ವೆಚ್ಚ ಹಾಗೂ ಹಾನಿಗಳಿಗೆ ಪರಿಹಾರ ನಿಗದಿಪಪಡಿಸದೆ ಈ ಅನುಮತಿ ನೀಡಲಾಗಿದೆ ಇದೊಂದು ಅವಸರದ ಹಾಗೂ ವಂಚಿಸುವ ರೀತಿಯಲ್ಲಿ ತೆಗದುಕೊಂಡ ಕ್ರಮವಾಗಿದ್ದು, ಸಂಶಯಕ್ಕೆಡೆ ಮಾಡಿಕೊಡುತ್ತದೆ.

**ಭಾಜಪ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಈ ರೈತ ವಿರೋದಿ ನೀತಿಗಳಿಗೆ ಬದ್ಧವಾಗಿವೆ:**

■ ಸಿಪಿಐ(ಎಂ) ಇತರ ಪ್ರಶ್ನೆಗಳ ಮಧ್ಯ, ಭೂಸುದಾರಣೆ ಮತ್ತು ಭೂರಹಿತರಿಗೆ ಭೂ ಹಂಚಿಕೆಯ ಪರವಾಗಿ ನಿಲ್ಲುತ್ತದೆ.

■ ಕಾರ್ಪೊರೇಟ್ ಕಂಪನಿಗಳು ಅಲ್ಪಸ್ವಲ್ಪ ಪರಿಹಾರವೆಂದು ನೀಡಿ ಭೂ ಕಬಳಿಕೆ ಮಾಡುವುದನ್ನು ಅತ್ಯಂತ ಕಟುವಾಗಿ ವಿರೋಧಿಸಲಾಗುವುದು.

■ ಸಿಪಿಐ(ಎಂ) ಸ್ವಾಮಿನಾಥನ್ ಆಯೋಗದ ಶಿಪಾರಸ್ಸುಗಳನ್ನು ಜಾರಿ ಗೊಳಿಸಲು ಕಟಿಬದ್ದವಾಗಿದೆ. ಕನಿಷ್ಟ ಬೆಂಬಲ ಬೆಲೆಗೆ ಸಂಬಂಧಿಸಿದಂತೆ ಈ ಶಿಪಾರಸ್ಸುಗಳು ರೈತರಿಗೆ ಉತ್ಪಾದನಾ ವೆಚ್ಚ ಮೇಲೆ ಶೇ. 50 ರಷ್ಟು ಲಾಭವನ್ನು ಖಚಿತಪಡಿಸುತ್ತದೆ.

■ ಸಿಪಿಐ(ಎಂ) ಬಲಿಷ್ಠ ಸಂಗ್ರಹಣಾ ವ್ಯವಸ್ಥೆಗೆ ಧೋರಣೆಗೆ ಪರವಾಗಿ ನಿಲ್ಲುತ್ತದೆ. ಜಾಗತಿಕ ಮಾರುಕಟ್ಟೆಯ ಧಾರಣೆಗಳಲ್ಲಾದ ಏರುಪೇರುಗಳಿಂದ ಬೆಳೆಗಳು ಹಾನಿಗೊಳಗಾದಾಗ ಬೆಲೆ ಸ್ಥಿರೀಕರಣ ನಿಧಿ ಸ್ಥಾಪಿಸುವುದು ಹಾಗೂ ಸಂಗ್ರಹವನ್ನು

ಖಚಿತಪಡಿಸುವುದು.

- ಸಿಪಿಐ(ಎಂ) ಮುಕ್ತ ವ್ಯಾಪಾರ ಒಡಂಬಡಿಕೆಯನ್ನು ವಿರೋಧಿಸುತ್ತದೆ. ಯಾಕೆಂದರೆ ಅದು ನಮ್ಮ ರೈತರ ಹಿತಾಸಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುತ್ತದೆ.

- ಸಿಪಿಐ(ಎಂ) ಕೃಷಿ ಅಭಿವೃದ್ಧಿಗಾಗಿ ದೊಡ್ಡ ಪ್ರಮಾಣದಲ್ಲಿ ನಿಧಿ ಹೆಚ್ಚಿಸಲು ಬದ್ಧವಾಗಿದೆ. ಗ್ರಾಮೀಣ ಸೌಲಭ್ಯಗಳನ್ನು ವೃದ್ಧಿಸಿ, ಕೃಷಿ ಅಭಿವೃದ್ಧಿ, ರೈತರ ವರಮಾನ ಹೆಚ್ಚಿಸುವ ಹಾಗೂ ಗ್ರಾಮೀಣ ಬಡವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಗುರಿ ಹೊಂದಿದೆ.

- ಸಿಪಿಐ(ಎಂ) ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೃಷಿಕೂಲಿಕಾರರಿಗೆ ವರ್ಷದಲ್ಲಿ ಕನಿಷ್ಟ 200 ದಿನಗಳ ಉದ್ಯೋಗಾವಕಾಶಗಳು ಮತ್ತು ದಿನಕ್ಕೆ 300/– ರೂಗಳ ಕೂಲಿಯನ್ನು ಖಾತ್ರಿಪಡಿಸುವ ಸಾಮಾಜಿಕ ಭದ್ರತಾ ಕ್ರಮಗಳಿಗಾಗಿ ಆಲೋಚಿಸುತ್ತದೆ.

**ಪ್ರಸ್ತುತ ರೈತ ವಿರೋಧಿ ನೀತಿಗಳನ್ನು ರದ್ದುಮಾಡಲು**

**ಭಾರತೀಯ ಕೃಷಿ, ರೈತರು ಹಾಗೂ ಕೃಷಿಕೂಲಿಕಾರರನ್ನು ಸಂರಕ್ಷಿಸಲು**

**ಸಿಪಿಐ(ಎಂ)ಗೆ ಮತ ನೀಡಿ–ಎಡ ಶಕ್ತಿಗಳನ್ನು ಬೆಂಬಲಿಸಿ ಬಲಪಡಿಸಿರಿ.**

ಅನುವಾದ: **ಬಿ.ಎಸ್. ಸೊಪ್ಪಿನ್**
**ಮಹೇಶ್ ಪತ್ತಾರ್**

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

## ಒಂದು ಜಾತ್ಯಾತೀತ ಮತ್ತು
## ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

**ಬೆಲೆ : ರೂ. 5.00**

**ಮೂಲ:**
**ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ**

**ಪ್ರಕಟಣೆ:**
**ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)**
**ಕರ್ನಾಟಕ ರಾಜ್ಯ ಸಮಿತಿ**
**ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086**

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು

ಪ್ರತಿಗಳು: 3,000